ಶ್ರೀ ಎಸ್.ಎ.ರವೀಂದ್ರನಾಥ : ಇದು ರೈತರಿಗೇ ಬಿಟ್ಟಿರತಕ್ಕಂಥದ್ದು. ಸರ್ಕಾರದಿಂದ ಒಪ್ಪಿಗೆ ಪಡೆದುಕೊಂಡಿರುವ ಅಂಗಡಿಗಳಲ್ಲಿ ರೈತರೇ ಹೋಗಿ ಖರೀದಿ ಮಾಡಬಹುದು. ನಾವು ಸಬ್ಸಿಡಿ ಮಾತ್ರ ಕೊಡುತ್ತೇವೆ. ರೈತರು ತಂದು ಕೊಡುವ ಬಿಲ್ಲಿಗೆ ನಾವು ಕನಿಷ್ಠ, ಗರಿಷ್ಠ ಇಷ್ಟು ಪರ್ಸೆಂಟ್ ಸಬ್ಸಿಡಿ ಎಂದು ಮಾಡಿರುತ್ತೇವೆ. ಅದನ್ನು ಕೊಡುತ್ತೇವೆ. ಅದು ಬಿಟ್ಟರೆ, ರೈತರೇ ಖರೀದಿ ಮಾಡಲು ಅವಕಾಶ ಕೊಟ್ಟಿದ್ದೇವೆ.

ಶ್ರೀ ಸಿ.ಟಿ.ರವಿ : ಇಲ್ಲಿ ತೊಂದರೆಯಾಗುತ್ತಿರುವುದು, ಏಜೆನ್ಸಿ fix ಮಾಡಬೇಕಾದರೆ, state tender ಕರೆದಿರುತ್ತಾರೆ. ಆ ಏಜೆನ್ಸಿ tender fixing ನಲ್ಲೇ ಅವರು ಮಾರುಕಟ್ಟೆ ದರಕ್ಕಿಂತ ಹೆಚ್ಚು ಬೆಲೆ ನಿಗದಿ ಮಾಡಿರುತ್ತಾರೆ. ಇದನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಇಲ್ಲದೇ ಹೋದರೆ ನೀವು ಕೊಟ್ಟಿದ್ದೂ ರೈತರಿಗೆ ಲಾಭವಾಗುವುದಿಲ್ಲ. ಏಕೆಂದರೆ, ತೋಟಗಾರಿಕಾ ಇಲಾಖೆ, ಕೃಷಿ ಇಲಾಖೆ ಮೂಲಕ ಸಬ್ಸಿಡಿ ಚೆಕ್‌ನ್ನು ಏಜೆನ್ಸಿ ಕೊಡುತ್ತೀರಿ ರೈತರಿಗೆ ಕೊಡುವುದಿಲ್ಲ. ನೀವು ರೈತರಿಗೆ ಸಬ್ಸಿಡಿ ಚೆಕ್ ಅನ್ನು ಕೊಟ್ಟರೆ ಅವರು ಎಲ್ಲಿ ಬೇಕಾದರೂ ಮಾರುಕಟ್ಟೆ ದರದಲ್ಲಿ ಕೊಂಡುಕೊಳ್ಳುತ್ತಾರೆ. ಏಜೆನ್ಸಿ ನಿಗದಿ ನೀವು ಮಾಡಿದ್ದೀರಿ. ಇಂತಹ ಕಡೆಯೇ ಕೊಂಡುಕೊಳ್ಳಬೇಕೆಂದು ನೀವು ಏಜೆನ್ಸಿ ನಿಗದಿ ಮಾಡಿದಾಗ, ಆ ಏಜೆನ್ಸಿನಿಯವರು ಹೇಳಿದ್ದೇ ಬೆಲೆಯಾಗುತ್ತದೆ. ಒಂದು ರೀತಿ ಲೂಟಿ ನಡೆಯುತ್ತದೆ. ಸರ್ಕಾರ ಕೊಟ್ಟಿದರೂ ರೈತರಿಗೆ ಉಪಯೋಗವಾಗುವುದಿಲ್ಲ. ಇದನ್ನು ತಪ್ಪಿಸಲು ತೆಗೆದುಕೊಂಡಿರುವ ಕ್ರಮ ಏನು?

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಕೃಷಿ ಮಂತ್ರಿಗಳು ಉತ್ತರ ಹೇಳುವ ಮುಂಚೆ ಒಂದು ಸಲಹೆ, Horticulature Department ಅವರು ರೈತರಿಗೆ 50% ಸಬ್ಸಿಡಿಯನ್ನು ಬ್ಯಾಂಕ್‌ನಲ್ಲಿ account ಗೆ ಹಾಕುತ್ತಾರೆ. Agriculture ನವರೂ ಆ ರೀತಿ ಕ್ರಮ ತೆಗೆದುಕೊಳ್ಳವುದಕ್ಕೆ ಪ್ರಯತ್ನ ಮಾಡಿಸಬಹುದಾಗಿತ್ತು.

ಶ್ರೀ ಎಸ್.ಎ.ರವೀಂದ್ರನಾಥ : 2009–10ನೇ ಸಾಲಿನಲ್ಲಿ ಶಾಸಕರನ್ನು ಕರೆದು ಸಭೆ ಮಾಡಿ. ಅವರು ಏನು ಸಲಹೆಗಳನ್ನು ಕೊಡುತ್ತಾರೆ, ಅದರಲ್ಲಿ ಉತ್ತಮವಾದ ಸಲಹೆಗಳನ್ನು ತೆಗೆದುಕೊಂಡು ಮಾಡುತ್ತೇನೆ.

ರಾಜ್ಯದಲ್ಲಿ ದಾಳಿಂಬೆ ಬೆಳೆಗೆ ದುಂಡಾಣು ರೋಗದ ಬಗ್ಗೆ.

58(350) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ವಿ.ಉಮೇಶ್ ಕತ್ತಿ (ಮಾನ್ಯ ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು)

ಅ) ರಾಜ್ಯದಲ್ಲಿ ದಾಳಿಂಬೆ ಬೆಳೆ ಬೆಳೆಯುವ ಜಿಲ್ಲೆಗಳ ಸಂಖ್ಯೆ ಎಷ್ಟು; ಅವು ಯಾವುವು; ವಿವರ ನೀಡುವುದು;

ಹನ್ನೊಂದು

ಅವುಗಳು: ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ಬಿಜಾಪುರ, ತುಮಕೂರು, ಚಿತ್ರದುರ್ಗ, ಬೆಳಗಾಂ, ಗದಗ, ಬೀದರ್, ದಾವಣಗೆರೆ ಮತ್ತು ರಾಯಚೂರು.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ದಾಳಿಂಬೆ ಬೆಳೆಗೆ ದುಂಡಾಣು ರೋಗವು ಹರಡಿರುವುದರಿಂದ ರಾಜ್ಯದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಇ) ಹಾಗಿದ್ದಲ್ಲಿ, ದುಂಡಾಣು ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು (ತಾಲ್ಲೂಕುವಾರು, ಜಿಲ್ಲಾವಾರು ವಿವರ ನೀಡುವುದು);

ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ;

1. ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಯೋಜನೆ ಅಡಿಯಲ್ಲಿ ದಾಳಿಂಬೆ ದುಂಡಾಣು ರೋಗ ನಿಯಂತ್ರಣಕ್ಕಾಗಿ ಉತ್ತಮ ನಿರ್ವಹಣಾ ಪದ್ಧತಿಗಳನ್ನು (Good Management Practices) ಅನುಸರಿಸಲು ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.25,000/– ದಂತೆ ಸಹಾಯಧನವನ್ನು 4 ಹೆಕ್ಟೇರ್‌ವರೆಗೆ ನೀಡಲಾಗುತ್ತಿದೆ.

2. ದುಂಡಾಣು ರೋಗದ ನಿಯಂತ್ರಣೆಗೆ ಸಮೀಕ್ಷೆ (Survey), ಕಣ್ಗಾವಲು (Surveillance), ತರಬೇತಿ (Training), ಪ್ರಾತ್ಯಕ್ಷಿಕೆ (Demonstration) ಮತ್ತು ರೋಗ ಮುನ್ಸೂಚನೆ ವ್ಯವಸ್ಥೆ (Disease Forecasting) ಕಲ್ಪಿಸಲು ಜಾಲವನ್ನು ರೂಪಿಸಲಾಗಿರುತ್ತದೆ.

3. ರಾಜ್ಯ ಸರ್ಕಾರದ ವತಿಯಿಂದ ದುಂಡಾಣು ರೋಗದ ಬಗ್ಗೆ ಹೆಚ್ಚಿನ ಸಂಶೋಧನೆ ಕೈಗೊಂಡು ನಿಯಂತ್ರಣಕ್ಕೆ ಪರಿಣಾಮಕಾರಿ ನಿವಾರಣೋಪಾಯಗಳನ್ನು ಕಂಡು ಹಿಡಿಯಲು ರೂ.100 ಲಕ್ಷಗಳನ್ನು ವಿಶ್ವವಿದ್ಯಾನಿಲಯ, ಧಾರವಾಡರವರಿಗೆ ಮಂಜೂರು ಮಾಡಲಾಗಿದೆ.

ತಾಲ್ಲೂಕುವಾರು, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಈ ರೋಗವನ್ನು ತಡೆಗಟ್ಟಲು ಕೇಂದ್ರ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಹೌದು.

ಉ) ಹಾಗಿದ್ದಲ್ಲಿ, ಈ ಯೋಜನೆಯು ರಾಜ್ಯದಲ್ಲಿ ಜಾರಿಯಲ್ಲಿರುವುದೇ, ಈ ರೋಗವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಜಾರಿಯಲ್ಲಿದೆ, ವಿವರಗಳು ಮೇಲೆ 'ಇ' ನಲ್ಲಿರುವಂತೆ

ಅನುಬಂಧ

GMP ಕಾರ್ಯಕ್ರಮದಡಿ ದಾಳಿಂಬೆ ಪುನಶ್ಚೇತನಕ್ಕಾಗಿ ತಾಲ್ಲೂಕುವಾರು ಮತ್ತು ಜಿಲ್ಲಾವಾರು ದಾಳಿಂಬೆ ಪ್ರದೇಶ, GMP ಅಳವಡಿಸಿದ ಪ್ರದೇಶ ಹಾಗೂ ಸಹಾಯಧನ ನೀಡಲಾದ ವಿವರಗಳು

(2007–08ನೇ ಸಾಲಿನಿಂದ ಜನವರಿ 2009ರವರೆಗೆ)

ಕ್ರ ಸಂ	ಜಿಲ್ಲೆ	ತಾಲ್ಲೂಕಿನ ಹೆಸರು	ದಾಳಿಂಬೆ ಪ್ರದೇಶ (ಹೆಕ್ಟೇರ್)	GMP ಅಳವಡಿಸಿದ ಪ್ರದೇಶ (ಹೆಕ್ಟೇರ್)	ನೀಡಿದ ಸಹಾಯಧನ (ರೂ.ಲಕ್ಷ ಗಳಲ್ಲಿ)
1	ತುಮಕೂರು	1. ಮಧುಗಿರಿ	178.92	164.03	41.01
		2. ಪಾವಗಡ	600	408.28	102.07
		3. ಶಿರಾ	830	189.46	47.36
		4. ಗುಬ್ಬಿ	2.00	2.00	0.50
		5. ಚಿಕ್ಕನಾಯಕನಹಳ್ಳಿ	1.75	1.75	0.44
		ಒಟ್ಟು	**1612.67**	**765.52**	**191.3775**
2	ಚಿತ್ರದುರ್ಗ	1. ಚಿತ್ರದುರ್ಗ	37.42	31.55	7.89
		2. ಚಳ್ಳಕೆರೆ	314.00	219.75	54.94
		3. ಹೊಳಲ್ಕೆರೆ	10.20	7.63	1.90
		4. ಹೊಸದುರ್ಗ	27.20	17.51	4.30
		5. ಹಿರಿಯೂರು	1100.00	809.56	202.39
		6. ಮೊಳಕಾಲ್ಮೂರು	155.00	118.40	29.60
		ಒಟ್ಟು	**1643.82**	**1204.40**	**301.02**
3	ಬೆಳಗಾಂ	1. ಗೋಕಾಕ್	10.0	8.40	2.10
		2. ಸವದತ್ತಿ	16.0	9.30	2.32
		3. ರಾಮದುರ್ಗ	71.7	64.33	15.98
		4. ರಾಯಭಾಗ	22.0	5.70	1.42
		5. ಅಥಣಿ	257.52	210.00	52.49
		ಒಟ್ಟು	**377.22**	**297.73**	**74.31**
4	ಕೊಪ್ಪಳ	1. ಕೊಪ್ಪಳ	234.00	137.88	34.47
		2. ಗಂಗಾವತಿ	857.70	475.90	118.98
		3. ಕುಷ್ಟಗಿ	1398.00	973.48	243.33
		4. ಯಲಬುರ್ಗ	1090.00	420.17	104.97
		ಒಟ್ಟು	**3579.70**	**2007.43**	**501.75**

5	ಗದಗ್	1. ಮುಂಡರಗಿ	20.0	14.80	3.34
		2. ರೋಣ	189.33	189.33	43.20
		3. ಶಿರಹಟ್ಟಿ	3.6	2.80	0.70
		ಒಟ್ಟು	**212.93**	**206.93**	**47.24**
6	ದಾವಣಗೆರೆ	1. ದಾವಣಗೆರೆ	4.99	4.99	1.25
		2. ಹರಪನಹಳ್ಳಿ	22.95	22.95	5.74
		3. ಜಗಳೂರು	83.29	83.29	20.82
		4. ಹರಿಹರ	7.73	7.73	1.93
		ಒಟ್ಟು	**118.96**	**118.96**	**29.7425**
7	ಬಳ್ಳಾರಿ	1. ಬಳ್ಳಾರಿ	210.0	202.00	45.73
		2. ಹೂವಿನ ಹಡಗಲಿ	70.0	88.00	16.30
		3. ಹಗರಿ ಬೊಮ್ಮನಹಳ್ಳಿ	960.0	961.00	225.87
		4. ಕೂಡ್ಲಗಿ	41.0	33.00	7.20
		5. ಸಂಡೂರು	4.0	0.00	0.00
		6. ಶಿರಗುಪ್ಪ	39.0	14.00	3.21
		7. ಹೊಸಪೇಟೆ	16	0.00	0.00
		ಒಟ್ಟು	**1340.0**	**1298.0**	**298.3**
8	ಬಾಗಲಕೋಟೆ	1. ಬಾದಾಮಿ	206	172.37	43.10
		2. ಬಾಗಲಕೋಟೆ	1348	970.57	242.64
		3. ಬೀಳಗಿ	118	90.43	22.61
		4. ಹುನಗುಂದ	52	35.40	8.85
		5. ಜಮಖಂಡಿ	112	51.49	12.88
		6. ಮುಧೋಳ	360	319.34	79.88
		ಒಟ್ಟು	**2196**	**1639.6**	**409.96**
9	ಬೀದರ	1. ಜೌರದ್	2.8	0.00	0.00
		2. ಬಸವಕಲ್ಯಾಣ	12.78	10.12	2.65
		3. ಭಾಲ್ಕಿ	12.5	4.60	1.15
		4. ಬೀದರ್	0.00	0.00	0.00
		5. ಹುಮ್ನಾವಾದ್	30.3	0.00	0.00
		ಒಟ್ಟು	**58.38**	**14.72**	**3.8**
10	ರಾಯಚೂರು	1. ರಾಯಚೂರು	117	97.00	24.02
		2. ಮಾನ್ವಿ	377	272.00	62.40

		3. ಸಿಂಧನೂರು	341	241.00	62.77
		4. ಲಿಂಗಸೂಗೂರು	386	158.00	35.84
		5. ದೇವದುರ್ಗ	38	22.00	4.90
		ಒಟ್ಟು	**1259**	**790**	**189.93**
11	ಬಿಜಾಪುರ	1. ಬಿಜಾಪುರ	825	452.28	113.07
		2. ಇಂಡಿ	288.17	219.17	54.79
		3. ಸಿಂಧಗಿ	90	65.47	16.37
		4. ಬಸವನ ಬಾಗೇವಾಡಿ	94	46.11	11.53
		5. ಮುದ್ದೇಬಿಹಾಳ	39	16.35	4.09
		ಒಟ್ಟು	**1336.17**	**799.38**	**199.85**
		ಒಟ್ಟು (Garnd Total)	**13734.85**	**9142.67**	**2247.28**

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ನಮ್ಮ ರಾಜ್ಯದಲ್ಲಿ ದಾಳಿಂಬೆ ಬೆಳೆ ಎಷ್ಟು ಜಿಲ್ಲೆಯಲ್ಲಿ ಬೆಳೆಯುತ್ತಿದ್ದಾರೆ ಎನ್ನುವ ವಿವರವನ್ನು ಕೇಳಿದ್ದೆ. ಅದರ ಪ್ರಕಾರ ವಿವರಣೆಯನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಸುಮಾರು 11 ಜಿಲ್ಲೆಯಲ್ಲಿ ದಾಳಿಂಬೆ ಬೆಳೆಯನ್ನು ರೈತರು ಬೆಳೆಯುತ್ತಿದ್ದಾರೆ. ಇದು ಅತ್ಯಂತ ಆರ್ಥಿಕವಾದ ಬೆಳೆಯೆಂದು ತಮಗೆಲ್ಲಾ ಗೊತ್ತಿರುವ ವಿಚಾರ. ವಿದೇಶಿ ಮಾರುಕಟ್ಟೆಯಲ್ಲೂ ಕೂಡಾ ಈ ಬೆಳೆಗೆ ಬಹಳಷ್ಟು ಬೇಡಿಕೆ ಇದೆ. ಇದು ಒಂದು ಕಡೆ ರಾಷ್ಟ್ರಕ್ಕೆ ಆದಾಯ ತರುವಂಥ ಬೆಳೆಯಾಗಿದೆ. ಮತ್ತೊಂದು ಕಡೆ ರೈತನು ಕೂಡ ತನ್ನ ಆರ್ಥಿಕ ಭದ್ರತೆಯನ್ನು, ಸ್ವಾಲಂಬನೆಯನ್ನು ಮಾಡಿಕೊಳ್ಳಲು ಈ ಬೆಳೆಯಿಂದ ಅವಕಾಶವಿದೆ. ಆದರೆ, ಈಗ ದಾಳಿಂಬೆ ಬೆಳೆಗೆ ದುಂಡಾಣು ರೋಗ ತಗಲಿದೆ. ಆ ರೋಗವನ್ನು ನಿಯಂತ್ರಣ ಮಾಡಲು ಸರ್ಕಾರದಿಂದ, ಇಲಾಖೆಯಿಂದ ಹೇಗೆ ಸಾಧ್ಯವಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ರೋಗವನ್ನು ನಿಯಂತ್ರಣ ಮಾಡುತ್ತೇವೆಂದು ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಕೇಂದ್ರ ಸರ್ಕಾರದವರು ಈ ಬೆಳೆಯನ್ನು ರಕ್ಷಣೆ ಮಾಡಬೇಕು, ರೋಗವನ್ನು ನಿಯಂತ್ರಣ ಮಾಡಬೇಕೆಂದು ಒಂದು ಪ್ಯಾಕೇಜನ್ನು ಘೋಷಣೆ ಮಾಡಿದೆ. ಪ್ರತಿ ಹೆಕ್ಟೇರ್‌ಗೆ 25 ಸಾವಿರ ರೂಪಾಯಿ ಸಹಾಯಧನ ಕೇಂದ್ರ ಸರ್ಕಾರದವರು ಕೊಡಬೇಕು, ರಾಜ್ಯ ಸರ್ಕಾರದವರು ಅದಕ್ಕನುಗುಣವಾಗಿ 12 ಸಾವಿರ ರೂಪಾಯಿ ಸಹಾಯಧನ ಕೊಡಬೇಕೆಂದು ಘೋಷಣೆ ಮಾಡಿದೆ. ಆದರೆ, ರಾಜ್ಯಸರ್ಕಾರದವರು ಕೇಂದ್ರ ಸರ್ಕಾರದ ಹಣವನ್ನು ಮಾತ್ರ ವಿತರಣೆ ಮಾಡಿದ್ದಾರೆ. ಹೇಗೆ ವಿತರಣೆ ಮಆಡಿದ್ದಾರೆಂದರೆ, ಅದಕ್ಕೆ specification ಮಾಡಿದ್ದಾರೆ. ಅದೇನೆಂದರೆ, 4 ಹೆಕ್ಟೇರ್ ಮಾತ್ರ ಆ ಬೆಳ ಬೆಳೆದ ರೈತರಿಗೆ ಕೊಡಬೇಕು. ಉಳಿದ ವಿಸ್ತೀರ್ಣದ ಏರಿಯಾಗಳಿಗೆ ಅದು ಅನ್ವಯಿಸುವುದಿಲ್ಲ ಎಂದು ಹೇಳಿದ್ದಾರೆ. ಬೆಳೆ ಬೆಳೆದಿರುವಂಥ

ಇಡೀ ಏರಿಯಾದಲ್ಲಿ ಈ ರೋಗ ನಿಯಂತ್ರಣ ಮಾಡಬೇಕಾದರೆ, ಸಾಮೂಹಿಕವಾಗಿ ಕೀಟನಾಶಕಗಳನ್ನು ಸಿಂಪಡಿಸುವುದಾಗಲೀ, ಇನ್ನಿತರ ಮಾನದಂಡಗಳನ್ನು ಉಪಯೋಗಿಸಿ ನಿಯಂತ್ರಣ ಮಾಡುವ ಕೆಲಸ ಕಾರ್ಯಗಳು ಸರ್ಕಾರದಿಂದ ಆಗಬೇಕಾಗಿತ್ತು. ಆದರೆ, ಇವರು ಏನೂ ಹೇಳಿಲ್ಲ. ಕೇಂದ್ರ ಸರ್ಕಾರದ ನಿಯಮದಂತೆ ನಾವು 4 ಹೆಕ್ಟೇರ್ ಗೆ ಮಆತ್ರ ಕೊಡುತ್ತೇವೆ ಎಂದು ಹೇಳಿದ್ದಾರೆ ಆದರೆ, ರಾಜ್ಯ ಸರ್ಕಾರದ ಸಹಾಯಧನದ ಬಗ್ಗೆ ಉತ್ತರದಲ್ಲಿ ಏನೂ ಹೇಳಿಲ್ಲ. ಹೇಗೆ ನಿಯಂತ್ರಣ ಮಾಡುತ್ತೇವೆ? ತಜ್ಞರು, ವಿಶ್ವವಿದ್ಯಾನಿಲಯದಿಂದ ರೋಗ ನಿಯಂತ್ರಣ ಮಾಡಿ ಬೆಳೆ ಉಳಿಸುವ ಪ್ರಯತ್ನ ಸರ್ಕಾರದಿಂದ ಆಗಿಲ್ಲ. ಅದಕ್ಕೆ ಅವರು ಉತ್ತರವನ್ನು ಏನು ಹೇಳುತ್ತಾರೆ ಎನ್ನುವುದನ್ನು ತಮ್ಮ ಮೂಲಕ ಕೇಳಲು ಬಯಸುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) : ಮಾನ್ಯ ಕರಡಿ ಸಂಗಣ್ಣನವರು ರಾಜ್ಯದ ರೈತರಿಗೆ ಯಪಯುಕ್ತವಾದ ಪ್ರಶ್ನೆಯನ್ನು ಕೇಳಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆರ್ಥಿಕವಾಗಿ ರೈತನು ಸಬಲತೆಯನ್ನು ಹೊಂದಬಹುದು ಅದರ ಜೊತೆ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಸಹಾಯಕವಾಗುವ ದೃಷ್ಟಿಯಿಂದ ಅವರು ಹೇಳಿದ್ದಾರೆ. ರೋಗ ನಿಯಂತ್ರಣ ಮಾಡಲು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಈ ಎಲ್ಲಾ ರಾಜ್ಯಗಳಲ್ಲಿ ಪ್ರಾಯೋಗಿಕವಾಗಿ ಸಂಶೋಧನೆ ನಡೆಯುತ್ತಿದೆ. ಆದರೆ, ಇಲ್ಲಿಯವರೆಗೂ ರೋಗ ನಿವಾರಣೆಗೆ ಸರಿಯಾದ ಔಷಧಿಯನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ. ಕರ್ನಾಟಕದಲ್ಲಿ ಧಾರವಾಡ ವಿಶ್ವವಿದ್ಯಾನಿಲಯದಿಂದ ಇದರ ಬಗ್ಗೆ ಸಾಕಷ್ಟು ಸಂಶೋಧನೆ ಮಾಡಲು ಈಗಾಗಲೇ ಒಂದು ಕೋಟಿ ರೂಪಾಯಿ ಖರ್ಚು ಮಾಡಿ, ಮೂರು ವರ್ಷಗಳಿಂದಲೂ ರೋಗಕ್ಕೆ ಔಷಧಿಯನ್ನು ಕಂಡುಹಿಡಿಯಲು ಪ್ರಯತ್ನ ಮಾಡಿದ್ದೇವೆ. ಆದರೆ, ಇಲ್ಲಿಯವರೆಗೂ ರೋಗವನ್ನು ತಡೆಹಿಡಿಯಲು ಯಾವುದೇ ರೀತಿಯ ಔಷಧಿ ಸಿಗದೇ ಇರುವುದರಿಂದ, ಅದರ ಜೊತೆ ಮಾನ್ಯ ಕರಡಿ ಸಂಗಣ್ಣನವರು ಹೇಳಿದ ಹಾಗೆ, ರಾಜ್ಯದಲ್ಲಿ 11 ಜಿಲ್ಲೆಗಳಲ್ಲಿ 13 ಸಾವಿರ ಎಕರೆಯಷ್ಟು ಬೆಳೆಯನ್ನು ಬೆಳೆಯುತ್ತಿದ್ದೇವೆ. 2007–08ರಲ್ಲಿ ಕೇಂದ್ರ ಸರ್ಕಾರದ ಪ್ಯಾಕೇಜ್ ಬಂದಂಥ ಸಂದರ್ಭದಲ್ಲಿ, ಅವತ್ತು 4 ಹೆಕ್ಟೇರ್‌ಗೆ ತೀರ್ಮಾನ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಈಗ ತಂದಿದ್ದಾರೆ. ಅವರು ಹೇಳುತ್ತಿರುವುದೇನೆಂದರೆ, ರೋಗ ನಿಯಂತ್ರಣ ಮಾಡಬೇಕಾದರೆ, ರೈತ ಸಮೂಹದವರೆಲ್ಲರೂ ಕೂಡಿ ಆ ಭಾಗದಲ್ಲಿರುವಂತಹ ದಾಳಿಂಬೆ ಬೆಳೆಗೆ ಔಷಧಿ ಸಿಂಪಡನೆ ಮಾಡಿದರೆ ಮಾತ್ರ ನಿಯಂತ್ರಣ ಮಾಡಲು ಸಾಧ್ಯವಿದೆ. ಆದರೆ, 4 ಹೆಕ್ಟೇರ್‌ನಲ್ಲಿ ಸ್ವಲ್ಪ ಉಳಿದುಕೊಂಡಿದ್ದರೆ, ಮತ್ತೆ ಅದು ಹರಡುವಂಥ ವ್ಯವಸ್ಥೆ ಇರುವುದರಿಂದ ಯಾರು ಎಷ್ಟು ದ್ರಾಕ್ಷಿ ಬೆಳೆದಿದ್ದಾರೊ ಅವರೆಲ್ಲರಿಗೂ ಇದು ಅನ್ವಯ ಮಾಡಬೇಕಾಗುತ್ತದೆ. ಆ ವಿಷಯವನ್ನು ಮುಂದಿನ ದಿವಸಗಳಲ್ಲಿ ಸರಿಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತೇನೆ. ಇದಲ್ಲದೆ ಏನು ರಾಜ್ಯದಲ್ಲಿ 13 ಸಾವಿರ ಹೆಕ್ಟೇರ್ ಬೆಳೆ

ಬೆಳೆಯುತ್ತಿದ್ದಾರೆ, ಅದರಲ್ಲಿ 9 ಸಾವಿರ ಹೆಕ್ಟೇರ್ ಬೆಳೆಗೆ ಕೇಂದ್ರದಿಂದ ಬಂದಿರುವ ಪ್ಯಾಕೇಜ್‌ನ್ನು ನಾವು ಬಿಡುಗಡೆ ಮಾಡಿದ್ದೇವೆ. ಆದರೆ, ಕೇಂದ್ರ ಸರ್ಕಾರ 25 ಸಾವಿರ ಪ್ಯಾಕೇಜ್ ಬಿಡುಗಡೆ ಮಾಡಿದ ತಕ್ಷಣ, ರೈತರು ಆ ಬೆಳೆಗಳಿಗೆ ರೋಗ ನಿಯಂತ್ರಣ ಮಾಡುವ ಪ್ರಯತ್ನವನ್ನು ಮಾಡಲಿಲ್ಲ ಅವರು ಇದನ್ನು ಪರಿಹಾರ ಎಂದು ಅರ್ಥ ಮಾಡಿಕೊಂಡರು. ದಾವಣಗೆರೆಯ ಜಗಳೂರು ತಾಲ್ಲೂಕಿಗೆ ನಾನೇ ಸ್ವತಃ ಭೇಟಿ ಮಾಡಿದ್ದೆ. ಅವು ಬಹಳ ಉತ್ತಮವಾಗಿ ದಾಳಿಂಬೆ ಬೆಳೆಯುವ ಪ್ರದೇಶಗಳಾಗಿವೆ. ಆದರೆ, ರೈತರು ದಾಳಿಂಬೆ ಬೆಳೆ ಬೆಳೆಯುವ ಪ್ರಯತ್ನವನ್ನು ಕೈಬಿಟ್ಟಿದ್ದಾರೆ. ರೋಗಕ್ಕೆ ತುತ್ತಾದ ದಾಳಿಂಬೆ ಗಿಡಗಳಿಗೆ ಯಾವುದೇ ಔಷಧಿಯನ್ನು ಸಿಂಪಡಿಸಲು ಹೋಗಲಿಲ್ಲ ಅಥವಾ ಯಾವುದೇ ಪ್ರಯತ್ನಗಳನ್ನು ಕೈಗೊಳ್ಳುವ ಸಂದರ್ಭಗಳು ಕಾಣಲಿಲ್ಲ. ಹಾಗಾಗಿ, ರಾಜ್ಯ ಸರ್ಕಾರದಿಂದ ಕೊಡುವ ಪರಿಹಾರ ನಿಲ್ಲಿಸಲಾಯಿತು. ಇದಲ್ಲದೆ, ಕೆಲವು ಭಾಗಗಳಲ್ಲಿ ರಾಜ್ಯದ ರೈತರು ಈ ಬೆಳೆಯನ್ನು ಕಿತ್ತು ಹಾಕುವ ಮಟ್ಟಕ್ಕೂ ಹೋದರು. ಏಕೆಂದರೆ, ಆ ಬೆಳೆಗೆ ಬಂದ ರೋಗವು ನಿಯಂತ್ರಣವಾಗದಿರುವ ಸಂದರ್ಭದಲ್ಲಿ ಬೆಳೆಯನ್ನು ಕಿತ್ತು ಹಾಕುವ ಪ್ರಸಂಗಗಳು ಕಂಡುಬಂದವು. ಅದರ ಜೊತೆಗೆ, ಬೆಳೆಯನ್ನು ಯಾವುದೇ ರೀತಿ ಪುನಶ್ಚೇತನಗೊಳಿಸುವ ಪ್ರಯತ್ನಗಳನ್ನು ಮಾಡಲಿಲ್ಲವೆಂಬ ದೃಷಿಯಿಂದ ಈಗ ಕೆಲವು ರೈತರು ತಮ್ಮ ಬೆಳೆ ಉಳಿಸಿಕೊಂಡಿದ್ದಾರೆ. ಅಂತಹವರಿಗೆ ಔಷಧಿ ಪ್ಯಾಕೇಜ್‌ನಲ್ಲಿ ಪರಿಹಾರವನ್ನು ರಾಜ್ಯ ಸರ್ಕಾರ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರ ಈಗಾಗಲೇ ಕೊಟ್ಟಾಗಿದೆ. ಆದರೆ, ರೈತ ತಪ್ಪು ಅರ್ಥ ಮಾಡಿಕೊಂಡು ಪರಿಹಾರ ಎಂದು ತಿಳಿದುಕೊಂಡು ಬೆಳೆ ರಕ್ಷಣೆಗೆ ಕ್ರಮ ಕೈಗೊಳ್ಳದೆ ಅಲ್ಲಿಗೇ ನಿಲ್ಲಿಸಿರುವುದು ನಮ್ಮ ಗಮನಕ್ಕೆ ಬಂದ ಮೇಲೆ ಮತ್ತೊಮ್ಮೆ ತನಿಖೆ ನಡೆಸಲು ನೇಮಿಸಿದ್ದೇವೆ. ಇವತ್ತು ಬೆಳೆದಿರುವ ಬೆಳೆಗೆ ಏನು 25,000 ರೂ.ಗಳನ್ನು ಕೊಟ್ಟಿದ್ದೇವೆ, ಅಂತಹವರಿಗೆ ರಾಜ್ಯ ಸರ್ಕಾರ ಕೂಡ 500 ರೂ. ಇಲ್ಲವೇ 1,000 ರೂ.ಗಳನ್ನು ಬಿಡುಗಡೆ ಮಾಡುವ ಪ್ರಯತ್ನ ಮಾಡುತ್ತದೆ.

ಶ್ರೀ ಟಿ.ಬಿ.ಜಯಚಂದ್ರ : ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲೂ ಇದು ಪ್ರಮುಖವಾದ ಪ್ರಶ್ನೆ ರೈತರನ್ನು ಕಾಡುತ್ತಿದೆ. ಈಗ Government of Indiaದ ಪ್ಯಾಕೇಜ್ ಏನಿದೆ, ಒಂದು ಹೆಕ್ಟೇರ್‌ಗೆ 50,000 ರೂ.ಗಳು ಬೇಕಾಗುತ್ತದೆ. ಅದರಲ್ಲಿ Horticulture Missionನಲ್ಲಿ 25% ಅಂದರೆ, 50% ಕೇಂದ್ರ ಸರ್ಕಾರ ಭರಿಸುತ್ತದೆ. 25% ರಾಜ್ಯ ಸರ್ಕಾರ ಭರಿಸಬೇಕು. 25% ರೈತ ಭರಿಸಬೇಕು. ರೈತ ಈಗಾಗಲೇ ಇನ್‌ವೆಸ್ಟ್ ಮಾಡಿದ್ದಾನೆ, ಬೆಳೆಯನ್ನೂ ಹಾಳು ಮಾಡಿಕೊಂಡಿದ್ದಾನೆ. ಹಾಗಾಗಿ, ಇದರಲ್ಲಿ ಈಗ ಪ್ರಶ್ನೆ ಇರುವುದೇನೆಂದರೆ, ರಾಜ್ಯ ಸರ್ಕಾರದ ಪಾಲು ಆಗಿರುವ 12,500 ರೂ. ಏನಿದೆ, ಅದನ್ನು ಬಿಡುಗಡೆ ಮಾಡಿಲ್ಲ. ಇದಕ್ಕೆ ನಾವು ಸಾಕಷ್ಟು ಕರೆಸ್ಪಾಂಡೆನ್ಸ್ ಮಾಡಿದ್ದೇವೆ. ಇವತ್ತು ತಮಗೂ ಕೂಡಾ ಕಾಗದ ಬರೆದಿದ್ದೇವೆ. 12.5%

ಅಂದರೆ, 12,500 ರೂ.ಗಳು. 25% of the State share. The Order is very clear. ಅದನ್ನು ಬಿಡುಗಡೆ ಮಾಡುತ್ತೀರಾ? ಹೇಳಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಶ್ರೀ ಜಯಚಂದ್ರರವರು ಕೇಳಿದಂತೆ, ರಾಜ್ಯ ಸರ್ಕಾರ ಏನು 12,500 ರೂ.ಗಳನ್ನು ಹೆಕ್ಟೇರ್‌ಗೆ ಕೊಡಬೇಕಾಗಿದೆ, ರಾಜ್ಯ ಸರ್ಕಾರದವರು ಅದರ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಅನೇಕ ಕಡೆಗಳಲ್ಲಿ ನಾವು ರೈತರನ್ನು ಉಳಿಸುತ್ತೇವೆ, ನಮ್ಮ ಸರ್ಕಾರ ರೈತರಿಗೋಸ್ಕರ ಇದೆಯೆಂದು ಹೇಳಿಕೊಳ್ಳುವ ಸಂದರ್ಭದಲ್ಲಿ ಇವತ್ತು ರೈತ ಬ್ಯಾಂಕಿನಿಂದ ಸಾಲ-ಸೋಲ ಮಾಡಿ ಬೆಳೆ ಬೆಳೆದು ಹಾಳಾಗಿದ್ದಾನೆ. ಮತ್ತು ಮಂತ್ರಿಗಳು ಮಾತನಾಡುತ್ತಾ, ತಾವು ಕೃಷಿ ಮನೆತನದಿಂದ ಬಂದಿರುವುದಾಗಿ ಹೇಳುತ್ತಾರೆ. ಆ ಬೆಳೆಗೆ ಬಂದಿರುವ ನುಸಿ ನಿಯಂತ್ರಣವಾಗದ್ದರಿಂದ ಬೆಳೆಯನ್ನು ರೈತರು ಕಿತ್ತು ಹಾಕಿದ್ದಾರೆಂದು ಹೇಳುತ್ತಾರೆ. ಇದರ ಅರ್ಥವೇನೆಂದರೆ, ಎಲ್ಲಿಯೋ ಒಬ್ಬ ರೈತ ಬೆಳೆ ಕಿತ್ತು ಹಾಕಿರಬಹುದು. ಆದರೆ, ಆ ಬೆಳೆಯನ್ನು ಉಳಿಸಿಕೊಳ್ಳುವ ಬಗ್ಗೆ ನಿಮ್ಮ ಸರ್ಕಾರದ ಇಲಾಖಾಧಿಕಾರಿಗಳು ಏನು ಕೆಲಸ-ಕಾರ್ಯಗಳನ್ನು ಮಾಡಿದ್ದಾರೆನ್ನುವುದು ಬಹಳ ಮುಖ್ಯ ಪ್ರಶ್ನೆಯಾಗಿದೆ. ಇವರು ಹೀಗೆ ಹೇಳುತ್ತಾ ಹೋದರೆ, ಅದನ್ನು ಕೇಳಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ? ರೈತರಿಗೆ ಬೆಳೆ ಬಗ್ಗೆ ತಿಳಿವಳಿಕೆಯನ್ನು, ಬೆಳೆಯನ್ನು ಉಳಿಸಿಕೊಳ್ಳುವ ಸಲುವಾಗಿ ಇಲಾಖಾಧಿಕಾರಿಗಳು, ಸರ್ಕಾರ ಮತ್ತು ಮಂತ್ರಿಗಳು ಕ್ರಮ ಕೈಗೊಳ್ಳಬೇಕಾಗುತ್ತದೆ. ಆ ಕಾರಣಕ್ಕಾಗಿ ನನ್ನ ಒತ್ತಾಯವೇನೆಂದರೆ, ಈಗ ರೈತ ಸಾಲ-ಸೋಲ ಮಾಡಿ ಇನ್‌ವೆಸ್ಟ್ ಮಾಡಿ ಏನು ಬಂಡವಾಳ ಹಾಕಿದ್ದಾನೆ, ಇವರು 12,500 ರೂ. ಕೊಡುವುದಕ್ಕೆ ಮೊದಲ ಆದ್ಯತೆ ನೀಡಬೇಕು. ಆ ಬೆಳೆ ಕಡಮೆ ಪ್ರಮಾಣದ ನೀರು ಇದ್ದರೂ ಬೆಳೆಯುತ್ತದೆ. Drip Irrigation ಮೂಲಕ ನಾವು ಅನೇಕ ನೀರಾವರಿ ಪ್ರದೇಶಗಳನ್ನು ತೆಗೆದುಕೊಂಡರೆ ಇವತ್ತು flood irrigation ಮತ್ತು bore irrigationನಲ್ಲಿ ಮಾಡುವುದಕ್ಕಿಂತಲೂ ಕಡಿಮೆ ಪ್ರಮಾಣದ ನೀರಿನಲ್ಲಿ ಬೆಳೆಯುವ ಮತ್ತು ಬರಡು ಭೂಮಿಯಲ್ಲಿ ಬೆಳೆಯುವ ಈ ಬೆಳೆಯನ್ನು ಉಳಿಸಿಕೊಳ್ಳಲಿಲ್ಲವೆಂದರೆ, ಈ ಸರ್ಕಾರದಿಂದ ಇನ್ನೇನು ಉಳಿಸಿಕೊಳ್ಳುವುದಕ್ಕಾಗುತ್ತದೆ? ಆ ಕಾರಣಕ್ಕಾಗಿ ಮಂತ್ರಿಗಳು ಮನಸ್ಸು ಮಾಡಿ 12,500 ರೂ.ಗಳ ಪರಿಹಾರ ಏನಿದೆ, ಅದನ್ನು ಮೊದಲು ಕೊಡಬೇಕೆಂದು ತಮ್ಮ ಮೂಲಕ ಅವರನ್ನು ಒತ್ತಾಯಿಸುತ್ತೇನೆ.

ಶ್ರೀ ಉಮೇಶ್ ಕತ್ತಿ : ಮಾನ್ಯ ಅಧ್ಯಕ್ಷರೆ, ಇವತ್ತು ಈ ದಾಳಿಂಬೆ ಬೆಳೆಗೆ ವಿರೋಧ ಪಕ್ಷದ ಮಾನ್ಯ ಉಪ ನಾಯಕರು ಹೇಳಿದಂತೆ ಇದಕ್ಕೆ 50,000 ರೂ. ಪ್ಯಾಕೇಜನ್ನು ಕೇಂದ್ರ ಸರ್ಕಾರ ಘೋಷಿಸಿತ್ತು. ಮೊದಲು 25,000 ರೂ. NHM ನಿಂದ ಕೇಂದ್ರ ಸರ್ಕಾರ ಬಿಡುಗಡೆ ಮಾಡುತ್ತದೆ. 12,500 ರೂ.ರೈತ ಭರಿಸಬೇಕು, 12,500 ರೂ. ರಾಜ್ಯ ಸರ್ಕಾರ ಭರಿಸಬೇಕೆಂದು ಪ್ಯಾಕೇಜ್ ಇದೆ. ಇದರಲ್ಲಿ

LM-VS.P.19

ಭಿನ್ನಾಭಿಪ್ರಾಯವೇನಿಲ್ಲ. ಈ ರಾಜ್ಯದಲ್ಲಿ ಬೆಳೆದ ರೈತರಿಗೆ ಅದನ್ನು ಕೊಡಬೇಕೆಂದು ತೀರ್ಮಾನ ಕೈಗೊಂಡು ಅವತ್ತಿನ ದಿವಸ 2007–08 ಮತ್ತು 2008–09ರಲ್ಲಿ ಇದಕ್ಕೆ ಪ್ಯಾಕೇಜ್ ಕೊಡುವಂತಹ ಕಾರ್ಯಕ್ರಮವನ್ನು ರೂಪಿಸಲಾಯಿತು. ಅದರ ಜೊತೆಗೆ, ಮಾನ್ಯ ಸದಸ್ಯರಾದ ಕರಡಿ ಸಂಗಣ್ಣ ಅಮರಪ್ಪನವರು ಕೇಳಿದಂತೆ, ತೋಟಗಾರಿಕೆ ಇಲಾಖೆಯ ಎಲ್ಲಾ ಅಧಿಕಾರಿಗಳು ಆ ಜಿಲ್ಲೆಗಳಲ್ಲಿ ಉಳಿದುಕೊಂಡು, ನಮ್ಮ Joint Director ಇರಬಹುದು, Additional Director ಇರಬಹುದು. ಈಗ ಬಂದ ರೋಗದ ನಿಯಂತ್ರಣಕ್ಕೋಸ್ಕರ ಸಾಕಷ್ಟು ಪ್ರಯತ್ನಗಳನ್ನು ಮಾಡಿರುವ ಉದಾಹರಣೆಗಳಿವೆ. ಅದನ್ನು ಇವತ್ತು ರೈತರೂ ಶ್ಲಾಘಿಸುತ್ತಾರೆ.

ದಾಳಿಂಬೆ ಬಹಳ ಮುಖ್ಯ ಬೆಳೆಯಾಗಿದ್ದು, ಇದನ್ನು ಏನಾದರೂ ಮಾಡಿ ಉಳಿಸಿಕೊಳ್ಳಬೇಕೆಂಬ ಪ್ರಯತ್ನಗಳು ನಡೆದಿದ್ದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ, ಕೆಲವು ಜನರು ಇದಕ್ಕೆ ಏನು ಮಾಡಿದರು ಎಂದರೆ, ಏನು ಪ್ಯಾಕೇಜ್ ಕೊಟ್ಟಿದ್ದೆವು, ಆ ಪ್ಯಾಕೇಜನ್ನು ಪರಿಹಾರವೆಂದು ತಿಳಿದುಕೊಂಡು 25,000 ರೂ.ಗಳನ್ನು ತೆಗೆದುಕೊಂಡು ಅದಕ್ಕೆ ಯಾವುದೇ ಔಷಧಿ ಸಿಂಪರಣೆ ಮಾಡುವ ಕಾರ್ಯಕ್ರಮ ಹ್ಮಮಿಕೊಳ್ಳಲಿಲ್ಲ. ಇನ್ನು ಕೆಲವು ರೈತರು ರೋಗ ಬಂತೆಂದು ಬೆಳೆಯನ್ನು ಕಿತ್ತು ಹಾಕಿದರು. ಕಿತ್ತು ಹಾಕಿದ ಬೆಳೆಗೆ ಪ್ಯಾಕೇಜ್‌ನಲ್ಲಿ ಯಾವ ರೀತಿ ಪರಿಹಾರ ಕೊಡಬೇಕೆಂಬುದನ್ನು ಸರ್ಕಾರದ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮ ಹತ್ತಿ ಅಧಿಕಾರಿಗಳು ಇಲ್ಲವೇ?

ಶ್ರೀ ಉಮೇಶ್ ಕತ್ತಿ : ದಯಮಾಡಿ ನನ್ನ ಉತ್ತರವನ್ನು ಪೂರ್ತಿಯಾಗಿ ಕೇಳಬೇಕು. ಈ ರೀತಿ ತೊಂದರೆಯಾಗಿ ಅವತ್ತಿನ ದಿನಗಳಲ್ಲಿ ಇದರ ಬಗ್ಗೆ ಯಾವುದೇ ತೀರ್ಮಾನಗಳಾಗಲಿಲ್ಲ. ಆದರೆ, ನಾನು ಒಬ್ಬ ರೈತನ ಮಗನಾಗಿ, ಕೃಷಿಕ ಕುಟುಂಬದಲ್ಲಿ ಜನಿಸಿರುವುದ ನಿಜ. ಇದರಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ನನಗೂ ರೈತರ ನೋವು ಏನೆಂದು ಅರ್ಥವಾಗುತ್ತದೆ. ಅದರ ಜೊತೆಗೆ ಸರ್ಕಾರದ ಉತ್ತರ ಹೇಳುವ ಮುಖ್ಯಮಂತ್ರಿಗಳು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದರೂ ರೈತರಿಗೋಸ್ಕರವೇ ಇವತ್ತು ಸರ್ಕಾರ ನಡೆಯುತ್ತಿರುವುದು. ಇದರ ಬಗ್ಗೆ ಆದಷ್ಟು ಬೇಗ ಮುಂಬರುವ 15 ದಿವಸದೊಳಗಾಗಿ ತೀರ್ಮಾನ ಕೈಗೊಂಡು ಪ್ಯಾಕೇಜ್‌ನಲ್ಲಿ ರಾಜ್ಯ ಸರ್ಕಾರ ಏನು 12,500 ರೂ.ಗಳನ್ನು ಬಿಡುಗಡೆ ಮಾಢಬೇಕು, ಆ ಹಣವನ್ನು ಬಿಡುಗಡೆ ಮಾಡುವ ಜವಾಬ್ದಾರಿ ಹೊತ್ತುಕೊಂಡು ಕೂಡಲೇ ಬಿಡುಗಡೆ ಮಾಡಿಸುತ್ತೇವೆ. ಆದರೆ, ಕಿತ್ತು ಹಾಕಿದ ಬೆಳೆ ಬಗ್ಗೆ ನಾಳೆ ನೀವೇ ಬೋಗಸ್ ಬಿಲ್ಲುಗಳನ್ನು ಹಾಕಿದ್ದೀರಿ, ಬೋಗಸ್ ಪರಿಹಾರ ಕೊಟ್ಟಿದ್ದೀರಿ ಎನ್ನುವುದು ಆಗಬಾರದೆಂಬ ದೃಷ್ಟಿಯಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ರೈತರಿಗೆ ಪ್ಯಾಕೇಜ್ ಕೊಟ್ಟಾಗ 25,000 ರೂ.ಗಳನ್ನು ನಾವು ಬಿಡುಗಡೆ ಮಾಡಿದಾಗ ಆ 25,000 ರೂ.ಗಳನ್ನು ಪಡೆದುಕೊಂಡು ಬೆಳೆ ಕಿತ್ತು ಹಾಕಿದ ಉದಾಹರಣೆಗಳಿವೆ.

ಅಥವಾ ರೋಗ ನಿಯಂತ್ರಣಕ್ಕೆ ಹಣವನ್ನು ಸದುಪಯೋಗಪಡಿಸಿಕೊಳ್ಳಲಿಲ್ಲ. ಇಂತಹ ಉದಾಹರಣೆಗಳಿರುವುದನ್ನು ನಿಮಗೂ ತೋರಿಸುತ್ತೇನೆ. ನೀವು ನಾಲ್ಕು ಜನರು ಯಾರಾದರೂ ಬಂದಲ್ಲಿ ಅಂತಹ ಬೆಳೆಗಳನ್ನು ನಿಮ್ಮೆದುರಿಗೇ ತೋರಿಸುವ ಪ್ರಯತ್ನವನ್ನು ನಾನು ಮಾಡುತ್ತೇನೆ. ಆದರೆ, ಪ್ಯಾಕೇಜ್ ಏನು ಘೋಷಿಸಲಾಗಿದೆ, ಅದನ್ನು ಕೊಡಲೇಬೇಕೆಂದರೆ, ಕೊಡುವ ತೀರ್ಮಾನ ತೆಗೆದುಕೊಳ್ಳೋಣ. ಅದರಲ್ಲೇನೂ ಭಿನ್ನಾಭಿಪ್ರಾಯವಿಲ್ಲ. ಆದರೆ, ಇವತ್ತು ಬೆಳೆ ಇದ್ದರೆ, ಅಂತಹುದಕ್ಕೆ ಕೊಡುವುದಕ್ಕೆ ನಾವೇನೂ ಹಿಂದೆ ಸರಿಯುವುದಿಲ್ಲ. ರೈತರಿಗೆ ಕೊಡುವ ನಿಟ್ಟಿನಲ್ಲಿ ಸರ್ಕಾರ ಯಾವುದೇ ರೀತಿಯಲ್ಲಿ ಹಿಂದೆ ಸರಿಯುವ ಪ್ರಶ್ನೆಯಿಲ್ಲ. ಬೆಳೆ ಉಳಿಸಿಕೊಂಡಿರುವ ರೈತರು ಯಾರಿದ್ದಾರೋ, ಅವರಿಗೆ ಪರಿಹಾರ ಕೊಡುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಶ್ರೀ ಟಿ.ಬಿ.ಜಯಚಂದ್ರ : ಯಾರೋ ಒಬ್ಬರು ತೊಂದರೆಯುಂಟು ಮಾಡಿದರು ಎನ್ನುವ ಕಾರಣಕ್ಕೋಸ್ಕರ ಅದನ್ನೇ generalize ಮಾಡಿ ಎಲ್ಲರಿಗೂ ಅನ್ವಯಿಸುವುದಕ್ಕೆ ಹೋಗಬೇಡಿ.

ಸಭಾಧ್ಯಕ್ಷರು : ಇನ್ನು 15 ದಿವಸಗಳಲ್ಲಿ ತೀರ್ಮಾನ ಕೈಗೊಳ್ಳುತ್ತೇವೆಂದು ಹೇಳಿದ್ದಾರಲ್ಲ. ಮತ್ತೇಕೆ ಪ್ರಸ್ತಾಪಿಸುತ್ತೀರಿ?

ಶ್ರೀ ಟಿ.ಬಿ.ಜಯಚಂದ್ರ : ಇದರಲ್ಲಿ ವಿಶೇಷವಾದ ಬೆಳೆ ಎಷ್ಟು ಹೆಕ್ಟೇರ್‌ಗಳಲ್ಲಿ ಬೆಳೆದಿದ್ದಾರೆ? ಇತ್ಯಾದಿ ಅಂಶಗಳೆಲ್ಲದರ ಬಗ್ಗೆ daily monitoring ವ್ಯವಸ್ಥೆ ಇರುವುದು ಎಲ್ಲರಿಗೂ ಗೊತ್ತಿದೆ. ಯಾರು ಬೆಳೆ ಕಿತ್ತು ಹಾಕಿದ್ದಾರೋ, ಅವರ ಬಗ್ಗೆ ಬೇಡ. ನೀವು ಕೊಡುವ 12,500 ರೂ.ಗಳಿಗೆ ಎರಡು ವರ್ಷಗಳಿಂದ ಹಾಗೇ ಇಟ್ಟುಕೊಂಡು ಕಾಯಬೇಕೆ?

ಶ್ರೀ ಉಮೇಶ್ ಕತ್ತಿ : ಮಾನ್ಯ ಅಧ್ಯಕ್ಷರೆ, 2005-06ರಲ್ಲಿ ಈ ಬೆಳೆಗೆ ಇದೇ ರೋಗ ಬಂದು ತೊಂದರೆಯುಂಟಾದಾಗ ಕೇಂದ್ರ ಸರ್ಕಾರದವರು ಮೊದಲನೇ ಹಂತದಲ್ಲಿ 10,000 ರೂ.ಗಳ ಪ್ಯಾಕೇಜ್ ಕೊಟ್ಟರು. ಆ ಪ್ಯಾಕೇಜ್ ಕೊಟ್ಟಾಗ ಆ ಬೆಳೆಯನ್ನು ತೆಗೆದು ಹಾಕಿ ಮೂಸಂಬಿ ಬೆಳೆ ಬೆಳೆದವರಿಗೆ 15,000 ರೂ.ಗಳನ್ನು ಕೊಡುವ ಕಾರ್ಯಕ್ರಮ ಇತ್ತು. ಈ ವಿಷಯ ಮಾನ್ಯ ಜಯಚಂದ್ರರವರಿಗೆ ಗೊತ್ತು. ಇದು ಮೊದಲನೇ ವರ್ಷದ ಕಾರ್ಯಕ್ರಮ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ಆಗ ಹನ ಕೊಟ್ಟ ಉದಾಹರಣೆಗಳಿವೆ. ಆದರೆ, ಮುಂದಿನ ವರ್ಷಕ್ಕೆ ಅದು ಅನುಷ್ಠಾನಗೊಳ್ಳದಿರುವ ಸಂದರ್ಭದಲ್ಲಿ, ಈ ಪ್ಯಾಕೇಜ್ ಕೊಡುವುದಕ್ಕೆ ಘೋಷಣೆಯಾದ ಸಂದರ್ಭದಲ್ಲಿ ಎರಡನೇ ವರ್ಷ ಔಷಧಿ ಸಿಂಪರಣೆ ಮಾಡುವ ಸಲುವಾಗಿ 25,000 ರೂ.ಗಳನ್ನು ಬಿಡುಗಡೆ ಮಾಡಿದೆವು. ಆದರೆ, ಅಷ್ಟರೊಳಗೆ ರೈತ ಇದ್ದ ಬೆಳೆಯನ್ನು ಕಿತ್ತು ಹಾಕಿದ ಮೇಲೆ 12,500 ರೂ.ಗಳನ್ನು ರಾಜ್ಯ ಸರ್ಕಾರ ಕೊಡುವುದರಲ್ಲಿ ಹಿಂದೇಟು ಹಾಕುವ ಪ್ರಶ್ನೆಯೇ ಇಲ್ಲ. ರೈತ 12,500 ರೂ.ಗಳನ್ನು ಭರಿಸಬೇಕು, ರಾಜ್ಯ ಸರ್ಕಾರ 12,500 ರೋ.ಗಳನ್ನು ಭರಿಸಬೇಕು ಮತ್ತು ಕೇಂದ್ರ

ಸರ್ಕಾರವು 25,000 ರೂ.ಗಳ ಪ್ಯಾಕೇಜ್ ಕೊಡಬೇಕು. ಮೊದಲನೇ ಕಂತಾಗಿ 25,000 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ರೈತ ಬೆಳೆಗೆ ಔಷಧಿ ಸಿಂಪರಣೆ ಮಾಡಿ ಬೆಳೆಯನ್ನು ಉಳಿಸಿಕೊಳ್ಳಬೇಕಾಗಿತ್ತು. ಆದರೆ, ಬೆಳೆ ಇಲ್ಲದೆ ಪರಿಹಾರ ಕೊಟ್ಟಲ್ಲಿ, ನಾಳೆ ದಿವಸ ಇದು ಆಗಬಾರದೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಉಳಿದ ಬೆಳೆಯನ್ನು ಅವತ್ತಿನ ದಿವಸ ಯಾರು ಕಿತ್ತು ಹಾಕಿಲ್ಲವೋ ರೋಗವನ್ನು ನಿಯಂತ್ರಿಸಿದ್ದಾರೋ, ಅಂತಹ ಬೆಳೆಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಪರಿಹಾರ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶಿರಾ ಕ್ಷೇತ್ರದಲ್ಲಿ ಶೇಂಗಾ ಬೆಳೆ ನಷ್ಟದ ಬಗ್ಗೆ

59(323) ಶ್ರೀ ಜಯಚಂದ್ರ ಟಿ.ಬಿ.(ಶಿರಾ)
ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು)

ಅ) ಶಿರಾ ತಾಲ್ಲೂಕಿನಲ್ಲಿ ಶೇಂಗಾ ಬೆಳೆ ನಷ್ಟದ ಬಗ್ಗೆ ನೆರೆ ರಾಜ್ಯವಾದ ಆಂಧ್ರಪ್ರದೇಶದ ಮಾದರಿಯಲ್ಲಿ ಪರಿಹಾರ ನೀಡುವಂತೆ ಅಂದಿನ ಸರ್ಕಾರವನ್ನು ಒತ್ತಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹಾಗಿದ್ದಲ್ಲಿ ಶೇಂಗಾ ಬೆಳೆಯ ನಷ್ಟದ ಪ್ರಮಾಣ ಮತ್ತು ಅಂದಾಜು ಬೆಲೆ ಎಷ್ಟು?

ಶಿರಾ ತಾಲ್ಲೂಕಿನಲ್ಲಿ 46940 ಹೆಕ್ಟೇರ್ ಪ್ರದೇಶದಲ್ಲಿ ಶೇಂಗಾ ಬೆಳೆಗೆ ಹಾನಿಯಾಗಿರುತ್ತದೆ ಹಾಗೂ ಉತ್ಪಾದನೆಯಲ್ಲಿ ಸುಮಾರು 23704 ಟನ್ ನಷ್ಟ ವಾಗಬಹುದೆಂದು ಅಂದಾಜು ಮಾಡಲಾಗಿದೆ. ಇದರ ಅಂದಾಜು ಬೆಲೆ ಮೊತ್ತ ರೂ.52.15 ಕೋಟಿ ಆಗುತ್ತದೆ.

ಇ) ಸರ್ಕಾರ ನಷ್ಟದಿಂದ ಕಂಗೆಟ್ಟಿರುವ ಅಸಹಾಯಕ ರೈತರ ನೆರವಿಗೆ ಮುಂದಾಗುವುದೇ?

ಸದರಿ ರೈತರು ಬೆಳೆ ವಿಮಾ ಯೋಜನೆ ಅಡಿಯಲ್ಲಿ ಪ್ರೀಮಿಯಂ ಪಾವತಿಸುವ ಮೂಲಕ ಭಾಗವಹಿಸಿದ್ದರೆ, ಸದರಿ ಯೋಜನೆಯಡಿಯಲ್ಲಿ ನಿಯಮಾನುಸಾರ ಪರಿಹಾರವನ್ನು ಪಡೆಯಬಹುದಾಗಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಗೆ "ಹೌದು" ಎಂದು ಒಪ್ಪಿಕೊಂಡಿದ್ದೀರಿ. ಕೊನೆಯ ಪ್ರಶ್ನೆಗೆ, ಸಲಹೆ ಕೊಡುತ್ತಿದ್ದೀರಿ. ನಾನು ನಿಮ್ಮ ಸಲಹೆ, ಉಪದೇಶ ಕೇಳುವುದಕ್ಕಲ್ಲ ಪ್ರಶ್ನೆ ಕೇಳಿದ್ದು. ನನ್ನ ಪ್ರಶ್ನೆ ಏನೆಂದರೆ, ಇಂತಹುದೇ ಪ್ರಸಂಗ ಬಂದಾಗ un-seasonal rains ಆಗಿ ಬೆಳೆ ಹಾಳಾದ ಸಂದರ್ಭದಲ್ಲಿ ನಮ್ಮ ನೆರೆ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಇವತ್ತು